ಆಗಿಬಿಟ್ಟಿದೆ. ಎಲ್ಲ ಶರಣರ ಪ್ರತಿಮಾ ನಿರ್ಮಾಣದ ಈ ವೇಳೆಯಲ್ಲಿ ಅಲ್ಲಮನ ಪ್ರತಿಮೆಯ ರೂಪ ಯಾವ ಎತ್ತರದ್ದೆಂದು ಗೊತ್ತಾಗುತ್ತಿಲ್ಲ.

★★★

'ಊರದ ಚೇಳಿನ ಏರದ ಬೇನೆಗೆ' ಔಷಧಿ ಅಂದರೆ ಅದು 'ಹುಟ್ಟದ ಗಿಡುವಿನ ಬಿಟ್ಟೆಲೆಯ ತಂದು ಮುಟ್ಟದೆ ಪೂಸಿದೊಡೆ' ಎಂದಿದ್ದಾನೆ ಅಲ್ಲಮ. ಆದರೆ, ಅದು ಸಿಕ್ಕಿಲ್ಲ, ಸಿಗುತ್ತಿಲ್ಲ. ಅದನ್ನು ಹುಡುಕ ಹೊರಟ ಅಲ್ಲಮ ತೊಡಗಿದ ಪ್ರಯಾಣದ ಹೆಜ್ಜೆಗಳೆಂದರೆ, ಕಾಯದ ಕಣ್ಣು ಮುಚ್ಚಿ, ಜ್ಞಾನದ ಕಣ್ಣು ತೆರೆದು ನೋಡಲು ಅಲ್ಲಿ ಒಂದು ನಿರಾಕಾರ. ಆ ನಿರಾಕಾರ ನಿರ್ಣಯಿಸಿ ನೋಡಲು ನಿಶ್ಶೂನ್ಯ. ಆ ನಿಶ್ಶೂನ್ಯದ ಬೆಳಕಲ್ಲದಲ್ಲಿ, ಕತ್ತಲೆಯಲ್ಲದಲ್ಲಿ ಕಂಡದ್ದು ಬಚ್ಚ ಬರಿಯ ಬಯಲು. ಅಲ್ಲಮ ನಡೆದು ಸಾಧಿಸಿದ ಅಧ್ಯಾತ್ಮದ ಪರಿಭಾಷೆಯ ಮಾತುಗಳು ಅವನ ವಚನಗಳಲ್ಲಿ ಪುನರಾವರ್ತನೆಯಾಗಿ ಕಾಣಿಸಿಕೊಳ್ಳುತ್ತವೆ. ಆದರೆ, ನಮ್ಮ ಜನಪದರಾದರೋ ಬಳ್ಳಿಗಾವೆ, ಬನವಾಸಿ, ಕಲ್ಯಾಣ, ಸೊನ್ನಲಿಗೆ, ಶ್ರೀಶೈಲ, ಉತ್ತರ ದಿಕ್ಕು ಎಂದು ತಲೆ ಕೆಡಿಸಿಕೊಳ್ಳದೆ, ಅಕ್ಷರ ಬಲ್ಲವರಿಗಿಂತ ಮುಂದಾಗಿ ಆತನ ಮಾತುಗಳನ್ನು ಹಾಗೂ ಹೀಗೂ ಕೇಳಿಸಿಕೊಂಡು, ತಮಗೆ ಬೇಕಾದಂತೆ ಕಥೆ ಕಟ್ಟಿಕೊಂಡು ಕಡೆಗೆ ಅಲ್ಲಮ ಎಲ್ಲಿಯವನು ಅಂದರೆ ಅವನ ಪಾದಗಳು ಇಲ್ಲೇ ನಮ್ಮ ಊರಿನ ನದಿತಟದಲ್ಲಿ, ತೊರೆಯ ತಡಿಯಲ್ಲಿ ಇದೆಯೆಂದು ಅಲ್ಲೇ ಕಾಣುವ ಪಾದಗಟ್ಟೆಯನ್ನು ತೋರಿಸಿಬಿಡುತ್ತಾರೆ. ಜನಪದರ ಹಾಡು, ಅಧ್ಯಾತ್ಮ, ಭಕ್ತಿಯು ಕಿರೀಟವುಳ್ಳ ದೈವ, ಭವ್ಯ ದೇವಾಲಯ ಅಥವಾ ರಾಜ ಮಹಾರಾಜರ ಮುಡಿಯಿಂದ ಮೊದಲಾಗುವುದಿಲ್ಲ. ಅವು ಪಾದಗಳಿಂದಲೇ ಆರಂಭಗೊಳ್ಳುತ್ತವೆ. ಹಾಗಾಗಿ ಅಲ್ಲಮನ ಪ್ರತಿಮೆ, ಗುಡಿಗಳ ಬದಲಾಗಿ ಅವನ ಪಾದದ ಗುರುತು ಎಲ್ಲೆಲ್ಲೂ ಇವೆ. ಈ ಹಿನ್ನೆಲೆಯಲ್ಲಿ ಅಲ್ಲಮನದೇ ಒಂದು ವಚನ:

ಅಗ್ಘವಣಿ ಪತ್ರೆ ಪುಷ್ಪ ಧೂಪ ದೀಪ ನಿವಾಳಿಯಲ್ಲಿ
ಪೂಜಿಸಿ ಪೂಜಿಸಿ ಬಳಲುತ್ತಿದ್ದಾರೆ
ಏನೆಂದಱಿಯರು ಎಂತೆಂದಱಿಯರು
ಜನ ಮರುಳೋ, ಜಾತ್ರೆ ಮರುಳೋ ಎಂಬಂತೆ
ಎಲ್ಲರೂ ಪೂಜಿಸಿ, ಏನನೂ ಕಾಣದೆ
ಲಯಕ್ಕೊಳಗಾಗಿಹೋದರು ನೋಡಾ ಗುಹೇಶ್ವರ ॥


## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ. ಅವರ ಕುಮಾರವ್ಯಾಸ ಭಾರತ ಸಂಗ್ರಹ, 'ಸರಸ ಸೌಗಂಧಿಕದ ಪರಿಮಳ' ಪುಸ್ತಕವನ್ನು ಶಿವಮೊಗ್ಗದ ಅಹರ್ನಿಶಿ ಪ್ರಕಾಶನ ಸದ್ಯದಲ್ಲೇ ಪ್ರಕಟಿಸಲಿದೆ.